**ST ALOYSIUS**

**(DEEMED TO BE UNIVERSITY)**

**MANGALURU, KARNATAKA 575003 - INDIA**

ESTD : 1880

# NEWS CLIPPINGS

## 16-02-2026 TO 28-02-2026

*Udayavani 18-02-2026*

## ಅಲೋಶಿಯಸ್ ವಿವಿಯಲ್ಲಿ ಅಂತಾರಾಷ್ಟ್ರೀಯ ಸಮ್ಮೇಳನ ನದಿ, ಪರಿಸರದ ಕೇಂದ್ರೀಕೃತ ಸಂಶೋಧನೆ ಸಹಕಾರ ಒಪ್ಪಂದ



**ಬಾವುಟಗುಡ್ಡೆ, ಫೆ. 17:** ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯ ಮತ್ತು ಫಿಲಿಪ್ಪೈನ್ಸ್‌ನ ನಾಗಾ ಸಿಟಿ ಕೊಯಲಿಷನ್ ಫಾರ್ ಆರ್ಟ್ಸ್ ಆಂಡ್ ಕಲ್ಚರ್ ಸಹಭಾಗಿತ್ವದಲ್ಲಿ ಆಟೆನಿಯೊ ಡಿ ನಾಗಾ ವಿಶ್ವವಿದ್ಯಾಲಯದ ವಿವಿ ಸಂಶೋಧನಾ ಮಂಡಳಿಯು ನದಿಗಳು ಮತ್ತು ಪರಿಸರದ ಮೇಲೆ ಕೇಂದ್ರೀಕೃತವಾದ ಸಂಶೋಧನೆಗಾಗಿ ಐದು ವರ್ಷಗಳ ಕಾರ್ಯಕ್ರಮಾತ್ಮಕ ಕಾರ್ಯತಂತ್ರದ ಕ್ರಿಯಾ ಯೋಜನೆ 'ಎಕೋಸ್ ಆಫ್ ದಿ ರಿವರ್: ಇಂಟಿಗ್ರೇಟಿಂಗ್ ಪಾಲಿಸಿ, ರಿಸರ್ಚ್, ಆಂಡ್ ದಿ ಹ್ಯುಮಾನಿಟೀಸ್ ಫಾರ್ ಎ ಫ್ಲೂಯಿಡ್ ಫ್ಯೂಚರ್' ಎಂಬ ಅಂತಾರಾಷ್ಟ್ರೀಯ ಸಮ್ಮೇಳನ ನಡೆಯಿತು.

ಎಡಿಎನ್‌ಯು ಅಧ್ಯಕ್ಷ ಫಾ| ಅರಿಸ್ಟಾಟಲ್ ಡ್ವೈ ಅವರು, ಪೋಪ್ ಫ್ರಾನ್ಸಿಸ್ ಅವರ 'ಲೌಡಾಟೊ ಸಿ' ಎಂಬ ವಿಶ್ವಕೋಶಕ್ಕೆ ವಿಶ್ವವಿದ್ಯಾಲಯದ ನಿರಂತರ ಬದ್ಧತೆಯ ಬಗ್ಗೆ ತಿಳಿಸಿದರು. ಫಿಲಿಪ್ಪೈನ್ಸ್‌ನ ನಾರ್ಮಲ್ ವಿಶ್ವವಿದ್ಯಾಲಯದ ಡಾ| ಮೇರಿ ಪಾಜ್ ಮೊರೇಲ್ಸ್ ಪ್ರಧಾನ ಭಾಷಣ ಮಾಡಿದರು.

ಜಪಾನ್‌ನ ಸೋಫಿಯಾ ವಿಶ್ವವಿದ್ಯಾಲಯದ ಡಾ| ಗುವಾಂಗ್ವೇ ಹುವಾಂಗ್, ಇಟಲಿಯ ನೇಪಲ್ಸ್ ಫೆಡೆರಿಕೊ ಐಐ ವಿಶ್ವವಿದ್ಯಾಲಯದ ಡಾ| ಸಾಲ್ವಟೋರ್ ಮನ್ಸ್ರೆಡಾ, ಆಟೆನಿಯೊ ಡಿ ನಾಗಾ ವಿಶ್ವವಿದ್ಯಾಲಯದ ಡಾ| ಪಾಜ್ ವರ್ಡೆಡ್ಸ್ ಸ್ಯಾಂಟೋಸ್, ಜಿನೀವಾ ವಿಶ್ವವಿದ್ಯಾಲಯದ ಡಾ| ಸಿರಿಲ್ ವ್ಯಾಲೆಟ್, ಅಲೋಶಿಯಸ್ ವಿಶ್ವವಿದ್ಯಾನಿಲಯದ ಸಮಾಜ ಕಾರ್ಯ ಸ್ನಾತಕೋತ್ತರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ| ವಿದ್ಯಾ ವಿನುತಾ ಡಿ'ಸೋಜಾ, ಎಡಿಎನ್‌ಯು ಅಧ್ಯಾಪಕ ಸದಸ್ಯೆ ಖಿಮ್ ಕ್ಯಾಥ್ಲೀನ್ ಎಂ.ಸದ್ದಿ ಉಪನ್ಯಾಸ ನೀಡಿದರು. ಅಂತಾರಾಷ್ಟ್ರೀಯ ಶೈಕ್ಷಣಿಕ ಪಾಲುದಾರಿಕೆಗಳನ್ನು ಬಲಪಡಿಸಲು ಆಟೆನಿಯೊ ಡಿ ನಾಗಾ ವಿಶ್ವವಿದ್ಯಾನಿಲಯ ಮತ್ತು ಅಲೋಶಿಯಸ್ ವಿಶ್ವವಿದ್ಯಾನಿಲಯದ ನಡುವೆ ತಿಳುವಳಿಕೆ ಪತ್ರಗಳಿಗೆ ಸಹಿ ಹಾಕಲಾಯಿತು.

*Samyuktha karnataka 20-03-2026*

# ಮಾದಕದ್ರವ್ಯ ವ್ಯಸನದ ಬಗ್ಗೆ ಮಕ್ಕಳಿಗೆ ಅರಿವು

**ಸಂ.ಕ. ಸಮಾಚಾರ, ಮಂಗಳೂರು**

ಸಂತ ಅಲೋಶಿಯಸ್ ಗೊನ್ಜಾಗ ಶಾಲೆಯಲ್ಲಿ ಮಾದಕದ್ರವ್ಯ ವ್ಯಸನದ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ಸಲುವಾಗಿ 'ಡ್ರಗ್ಸ್ ಬೇಡ ಎನ್ನಿ' ಎಂಬ ಶೀರ್ಷಿಕೆಯಲ್ಲಿ 7 ಮತ್ತು 8ನೇ ತರಗತಿಯ ವಿದ್ಯಾರ್ಥಿಗಳಿಗಾಗಿ ಮಾದಕದ್ರವ್ಯ ವ್ಯಸನದ ವಿರುದ್ಧ ಇರುವ ಕಾನೂನು ಮತ್ತು ಅದರ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ ನಡೆಯಿತು.

ಸಂಸ್ಥೆಯ ಪ್ರಿನ್ಸಿಪಾಲ್ ಫಾ.ರೋಹನ್ ಡಿ ಅಲ್ಮೇಡಾ ಮಾತನಾಡಿ, ಮಾದಕ ದ್ರವ್ಯ ವ್ಯಸನಕ್ಕೆ ಸಂಬಂಧಿಸಿದಂತೆ ಜನಜಾಗೃತಿ ಮೂಡಿಸುವ ಅವಶ್ಯಕತೆ ಇದೆ. ಹದಿಹರೆಯದಲ್ಲಿ ಮಕ್ಕಳಲ್ಲಿ ಬಲವಾದ ಮೌಲ್ಯಗಳು ಹಾಗೂ ನೈತಿಕತೆಗೆ ಹೆಚ್ಚು ಒತ್ತು ನೀಡಬೇಕು ಎಂದರು.

ಪ್ರಸ್ತುತ ಕಾರ್ಯಕ್ರಮವನ್ನು ಸಂತ ಅಲೋಶಿಯಸ್ ಲಾ ಸ್ಕೂಲ್ ಆಯೋಜಿಸಿದ್ದು, ಲಾ ಸ್ಕೂಲ್‌ನ ಡೀನ್ ಉದಯಕೃಷ್ಣ ಬಿ., ಫಾ.ಪ್ರಶಾಂತ್ ಸಿಕ್ವೇರಾ, ಸಹಾಯಕ ಪ್ರಾಧ್ಯಾಪಕ ರಾಯನ್ ಫರ್ನಾಂಡಿಸ್, ಸಹ ಪ್ರಾಧ್ಯಾಪಕರಾದ ಭಗಿನಿ ರೇಖಾ ಲೋಬೊ ಉಪಸ್ಥಿತರಿದ್ದರು. ಮಾದಕ ದ್ರವ್ಯ ವ್ಯಸನಕ್ಕೆ ಸಂಬಂಧಿಸಿದ ಸಾಕ್ಷ್ಯಚಿತ್ರ ಹಾಗೂ 'ಜಸ್ಟ್ ವನ್' ನಾಟಕವನ್ನು ಪ್ರಸ್ತುತಪಡಿಸಲಾಯಿತು. ಧೀರಜ್ ಲೋಬೊ ಕಾರ್ಯಕ್ರಮ ಸಂಯೋಜಿಸಿದರು.



*Vijayavani 20-02-2026*

## ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಪಟ್ಲ ಸತೀಶ್ ಶೆಟ್ಟಿ ಹೇಳಿಕೆ

# ಯಕ್ಷಗಾನ ಪ್ರಪಂಚದ ಶ್ರೀಮಂತ ಕಲೆ

■ ವಿಜಯವಾಣಿ ಸುದ್ದಿಜಾಲ ಮಂಗಳೂರು

ಯಕ್ಷಗಾನ ಕಲೆ ಪ್ರಪಂಚದ ಶ್ರೀಮಂತ ಕಲೆಯಾಗಿ ಗುರುತಿಸಿಕೊಂಡಿದೆ. ಇಂಥ ಕಲೆ ಕುರಿತಾದ ಕೃತಿ ರಚನೆ ಅಭಿನಂದನಾರ್ಹ ಎಂದು ಭಾಗವತ ಪಟ್ಲ ಸತೀಶ್ ಶೆಟ್ಟಿ ಹೇಳಿದರು.

ನಗರದ ಸಂತ ಅಲೋಶಿಯಸ್ ಕಾಲೇಜಿನ ರಂಗ ಅಧ್ಯಯನ ಕೇಂದ್ರ ಮತ್ತು ಕನ್ನಡ ವಿಭಾಗದ ವತಿಯಿಂದ ಕಾಲೇಜಿನ ಎಲ್. ಎಫ್. ಸಭಾಂಗಣದಲ್ಲಿ ಶುಕ್ರವಾರ ತುಮಕೂರು ವಿವಿ ಪ್ರಾಧ್ಯಾಪಕ ಡಾ.ನಿತ್ಯಾನಂದ ಬಿ.ಶೆಟ್ಟಿ ಅವರ 'ಅಳವು ಅರಿಯದ ಭಾಷೆ' ಕಲೆ, ಸಮಾಜ, ಇತಿಹಾಸ ಪುಸ್ತಕವನ್ನು ಜೇನಿನ ಪೆಟ್ಟಿಗೆಯಿಂದ ಹೊರತೆಗೆಯುವ ಮೂಲಕ ಅನಾವರಣಗೊಳಿಸಿ ಮಾತನಾಡಿದರು.

ನೃತ್ಯ, ಅಭಿನಯ, ಸಂಗೀತ ಸೇರಿದಂತೆ ಎಲ್ಲ ರೀತಿಯ ಕಲಾ ಪ್ರಕಾರಗಳನ್ನೊಳಗೊಂಡ ಯಕ್ಷಗಾನ ಶುದ್ಧವಾದ ಕನ್ನಡ ಇಂದಿಗೂ ಉಳಿಸಿ, ಬೆಳೆಸುತ್ತಿದೆ. ಯಕ್ಷಗಾನ ಕಲೆಗೆ ಜಾತಿ, ಧರ್ಮ ಮೀರಿ ಕಲಾವಿದರ ಕೊಡುಗೆ ಇದೆ, ಅವರ ಪ್ರೀತಿ ಇದೆ ಎಂದರು.



ನಿತ್ಯಾನಂದ ಶೆಟ್ಟಿ ಅವರ 'ಅಳವು ಅರಿಯದ ಭಾಷೆ' ಪುಸ್ತಕ ಪಟ್ಲ ಸತೀಶ್ ಶೆಟ್ಟಿ ಬಿಡುಗಡೆಗೊಳಿಸಿದರು. ಡಾ.ಮೆಲ್ವಿನ್ ಡಿಕುನ್ಹಾ, ಕಿರಣ್ ಮಲ್ಯ, ಡಾ.ದಿನೇಶ್ ನಾಯಕ್, ಮಹಾಲಿಂಗ ಭಟ್ ಉಪಸ್ಥಿತರಿದ್ದರು.

ಕಾಂತಾವರ ಕನ್ನಡ ಸಂಘದ ಪ್ರಕಾಶನದಿಂದ ಹೊರತರಲಾದ ಕೃತಿ ಬಗ್ಗೆ ಕಾರ್ಕಳ ಯಕ್ಷ ರಂಗಾಯಣದ ನಿರ್ದೇಶಕ ಬಿ.ಆರ್.ವೆಂಕಟರಮಣ ಐತಾಳ ಮಾತನಾಡಿದರು.

ಸಂತ ಅಲೋಶಿಯಸ್ ವಿವಿ ಸಹ ಕುಲಪತಿ ಡಾ.ಮೆಲ್ವಿನ್ ಡಿಕುನ್ಹಾ ಅಧ್ಯಕ್ಷತೆ ವಹಿಸಿದ್ದರು. ಫ್ಯಾಮಿಲಿ ಟ್ರಸ್ಟ್‌ನ ಪ್ರಮುಖರಾದ ಕಿರಣ್ ಮಲ್ಯ, ಪ್ರಾಧ್ಯಾಪಕರಾದ ಡಾ.ದಿನೇಶ್ ನಾಯಕ್, ಮಹಾಲಿಂಗ ಭಟ್, ಕೃತಿಕಾರ ಡಾ.ನಿತ್ಯಾನಂದ ಶೆಟ್ಟಿ ಮೊದಲಾದವರು ಉಪಸ್ಥಿತರಿದ್ದರು. ಅಭಿಷೇಕ್ ನಿರೂಪಿಸಿದರು. ಹಿಂದೂಸ್ತಾನಿ ಗಾಯಕ ಕೀರ್ತನ್ ನಾಯಕ್ ಜೇಡರ ದಾಸಿಮಯ್ಯರ ವಚನದ ಸಾಲನ್ನು ಹಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಬಳಿಕ 'ಹೊತ್ತಗೆಯ ಹೊತ್ತು' ಸಂವಾದ ನಡೆಯಿತು.

*Udayavani 23-02-2026*

# ಅಲೋಶಿಯಸ್: 'ಪ್ರೇರಣಾ' ಸಾಂಸ್ಕೃತಿಕ ಉತ್ಸವ

**ಮಹಾನಗರ, ಫೆ. 22:** ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಭಾಷಾ ಮತ್ತು ಸಾಂಸ್ಕೃತಿಕ ಅಧ್ಯಯನ ಶಾಲೆಯ ಹಿಂದಿ ವಿಭಾಗ ಮತ್ತು ಹಿಂದಿ ಸಂಘದಿಂದ ಹಿಂದಿ ಸಾಂಸ್ಕೃತಿಕ ಉತ್ಸವ 'ಪ್ರೇರಣಾ 2026' ಇತ್ತೀಚೆಗೆ ನಡೆಯಿತು. ಮುಖ್ಯ ಅತಿಥಿಯಾಗಿ ಬಾಲಿವುಡ್ ತಾರೆ ಪ್ರೀತ್ ಕಮಾನಿ ಮತ್ತು ಅತಿಥಿಯಾಗಿ ಅಲೋಶಿಯಸ್‌ನ ಹಿಂದಿ ವಿಭಾಗದ ಮಾಜಿ ಮುಖ್ಯಸ್ಥ ಡಾ| ಮುಕುಂದ ಪ್ರಭು ಭಾಗವಹಿಸಿದ್ದರು.

ಕುಲಪತಿವಂ|ಡಾ|ಪ್ರವೀಣ್ ಮಾರ್ಟಿಸ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮ ಸಂಯೋಜಕಿ ರಾಯ್ನಿ ರೇಖಾ ಬ್ರ್ಯಾಗ್ಸ್ ಮತ್ತು ಡಾ| ಸಂಧ್ಯಾ ಯು. ಸಿರ್ಸಿಕರ್, ವಿಭಾಗ ಮುಖ್ಯಸ್ಥ ಡಾ| ಎಂ.ಎ. ನದಾಫ್ ಮತ್ತು ವಿದ್ಯಾರ್ಥಿ ಸಂಯೋಜಕರಾದ ರಫನ್ ಮತ್ತು ತ್ರಿಶಾ ಉಪಸ್ಥಿತರಿದ್ದರು.



ಕಾರ್ಯಕ್ರಮದ ಸಂದರ್ಭದಲ್ಲಿ ಹಿಂದಿ ವಿಭಾಗದ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ಸೃಜನಶೀಲ ಮತ್ತು ಸಾಹಿತ್ಯ ಕೃತಿಗಳನ್ನು ಒಳಗೊಂಡ ಪ್ರೇರಣಾ ನಿಯತಕಾಲಿಕೆಯನ್ನು ಬಿಡುಗಡೆ ಮಾಡಲಾಯಿತು. 18 ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಿಂದ 178ಕ್ಕೂ ಹೆಚ್ಚು ವಿದ್ಯಾರ್ಥಿಗಳು ಏಳು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು.

ಸಮಾರೋಪದ ಮುಖ್ಯ ಅತಿಥಿಯಾಗಿ ರಾಜ್ಯ ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಂ.ಎ. ಗಫೂರ್ ಭಾಗವಹಿಸಿದ್ದರು. ಅತಿಥಿಯಾಗಿ ನಟ ಮತ್ತು ಸಂಗೀತಗಾರ ಸ್ಟೀಟನ್ ಹಾಟ್ಮನ್ ಭಾಗವಹಿಸಿದ್ದರು. ವಿಜೇತರಿಗೆ ಟ್ರೋಫಿಗಳನ್ನು ನೀಡಲಾಯಿತು. ಎಸ್‌ಡಿಎಂ ಉಜಿರೆ ಕಾಲೇಜು ಚಾಂಪಿಯನ್‌ಶಿಪ್ ಅನ್ನು ಮತ್ತು ರನ್ನರ್ಸ್ ಅಪ್ ಅನ್ನು ಮಂಗಳೂರಿನ ಕೆನರಾ ಕಾಲೇಜು ಗೆದ್ದುಕೊಂಡಿತು.

*Kannadaprabha 22-02-2026*

# ಸಂತ ಅಲೋಶಿಯಸ್‌ನಲ್ಲಿ ಹಿಂದಿ ಸಾಂಸ್ಕೃತಿಕ ಉತ್ಸವ



ಅಲೋಶಿಯಸ್‌ನಲ್ಲಿ ಹಿಂದಿ ಸಾಂಸ್ಕೃತಿಕ ಉತ್ಸವ ನಡೆಯಿತು.

**ಮಂಗಳೂರು:** ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಭಾಷಾ ಮತ್ತು ಸಾಂಸ್ಕೃತಿಕ ಅಧ್ಯಯನ ಶಾಲೆಯ ಹಿಂದಿ ವಿಭಾಗ ಮತ್ತು ಹಿಂದಿ ಸಂಘವು 'ದೇಸಿ ಕಲಾಕಾರ್' ಎಂಬ ವಿಷಯದ ಮೇಲೆ ಹಿಂದಿ ಸಾಂಸ್ಕೃತಿಕ ಉತ್ಸವ 'ಪ್ರೇರಣಾ- 2026'ನ್ನು ಫೆ.18ರಂದು ಕ್ಯಾಂಪಸ್‌ನಲ್ಲಿ ಆಯೋಜಿಸಿತ್ತು.

ಮುಖ್ಯ ಅತಿಥಿಯಾಗಿ ಬಾಲಿವುಡ್ ತಾರೆ ಪ್ರೀತ್ ಕಮಾನಿ, ಅತಿಥಿಯಾಗಿ ಹಿಂದಿ ವಿಭಾಗದ ಮಾಜಿ ಮುಖ್ಯಸ್ಥ ಡಾ. ಮುಕುಂದ ಪ್ರಭು ಆಗಮಿಸಿದ್ದರು. ಕುಲಪತಿ ರೆ.ಫಾ.ಡಾ. ಪ್ರವೀಣ್ ಮಾರ್ಟಿಸ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮ ಸಂಯೋಜಕರಾದ ರಾಯ್ನ ರೇಖಾ ಬ್ರಾಗ್ಸ್ ಮತ್ತು ಡಾ. ಸಂಧ್ಯಾ ಯು. ಸಿರ್ಸಿಕರ್, ವಿಭಾಗ ಮುಖ್ಯಸ್ಥರಾದ ಡಾ.ಎಂ.ಎ. ಸದಾಫ್ ಮತ್ತು ವಿದ್ಯಾರ್ಥಿ ಸಂಯೋಜಕ ರಫಾನ್ ಮತ್ತು ತ್ರಿಶಾ ವೇದಿಕೆಯಲ್ಲಿದ್ದರು.

ಹಿಂದಿ ವಿಭಾಗದ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ಸೃಜನಶೀಲ ಮತ್ತು ಸಾಹಿತ್ಯ ಕೃತಿಗಳನ್ನು ಒಳಗೊಂಡ 'ಪ್ರೇರಣಾ' ನಿಯತಕಾಲಿಕೆಯನ್ನು ಬಿಡುಗಡೆ ಮಾಡಲಾಯಿತು. ಸಮಾರೋಪ ಸಮಾರಂಭದ ಮುಖ್ಯ ಅತಿಥಿಯಾಗಿ ಕರ್ನಾಟಕ ರಾಜ್ಯ ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ರಾಜ್ಯ ಸಚಿವ ಎಂ.ಎ. ಗಫೂರ್ ಆಗಮಿಸಿದ್ದರು. ಗೌರವ ಅತಿಥಿಯಾಗಿ ಸಂಗೀತಗಾರ ಸ್ಟೀಟನ್ ಹಾರ್ಟ್‌ಮನ್ ಭಾಗವಹಿಸಿದ್ದರು. ಎಸ್‌ಡಿಎಂ ಉಜಿರೆ ಕಾಲೇಜು ಚಾಂಪಿಯನ್‌ಶಿಪ್ ಮತ್ತು ರನ್ನರ್ಸ್ ಅಪ್‌ನ್ನು ಕೆನರಾ ಕಾಲೇಜು ಗೆದ್ದುಕೊಂಡಿತು.

Varthabharathi 22-02-2026

# ಸಂತ ಅಲೋಶಿಯಸ್ ಪರಿಗಣಿತ ವಿವಿಯಲ್ಲಿ ಟೆಡ್ ಎಕ್ಸ್ ಆವೃತ್ತಿ 5




ಮಂಗಳೂರು, ಫೆ.21: ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದಲ್ಲಿ ಟೆಡ್ ಎಕ್ಸ್ 5ನೇ ಆವೃತ್ತಿ 'ಅನ್ ರಿಟನ್ ಥ್ರೆಡ್ಸ್ ಆಫ್ ಥಾಟ್ಸ್' ಎಂಬ ಧ್ಯೇಯ ವಾಕ್ಯದೊಂದಿಗೆ ಶನಿವಾರ ಉದ್ಘಾಟನೆಗೊಂಡಿತು.

ಸಂಸ್ಥೆಯ ಹಳೆ ವಿದ್ಯಾರ್ಥಿ, ವಕೀಲ ಪಿ.ರಂಜನ್ ರಾವ್ ಕಾರ್ಯಕ್ರಮ ಉದ್ಘಾಟಿಸಿದರು.

ಮಥಾಯಸ್ ಅಲ್ಯುಮಿನಿಯಮ್ ಸಿಸ್ಟಮ್ ಪ್ರೈಲಿ. ಸಿಎಓ ಗೇವಿನ್ ಮಥಾಯಸ್ ಉಪಸ್ಥಿತರಿದ್ದರು.

ಸಂತ ಅಲೋಶಿಯಸ್ ಪರಿಗಣಿತ ವಿವಿಯ ಕುಲಪತಿ ವಂ.ಡಾ. ಪ್ರವೀಣ್ ಮಾರ್ಟಿಸ್ ಎಸ್.ಜೆ. ಅಧ್ಯಕ್ಷತೆ ವಹಿಸಿದ್ದರು.

ರವಿವಾರವೂ ನಡೆಯಿರುವ ಟೆಡ್ ಎಕ್ಸ್ ಆವೃತ್ತಿ 5ರಲ್ಲಿ ಉದ್ಯಮಿ ಹೃತಿಕ್ ಶರ್ಮಾ, ಫಿಟ್ನೆಸ್ ಕೋಚ್ ಸಿಮ್ರಾನ್ ಚೋಪ್ರಾ, ಕಂಟೆಂಟ್ ಕ್ರಿಯೇಟರ್ ಮರಿಯಂ ಹುಸೇನ್, ಇಎನ್‌ಟಿ ತಜ್ಞ ಡಾ.ಪಿ.ಪಿ.ದೇವನ್, ಶಿಕ್ಷಣ ತಜ್ಞೆ ಲಿಝಾ ಕಿರಣ್ ರೊಡ್ರಿಗಸ್, ಪ್ರಾಣಿ ಹಕ್ಕುಗಳ ಹೋರಾಟಗಾರ ಜಬಿ ಖಾನ್, ಪ್ರಶಾಂತ್ ಎಸ್. ನಾಯ್ಕ್, ಅರುಣ್ ಅಯ್ಯರ್, ಹೇಮಂತ್ ಶರ್ಮಾ, ಅದ್ವಿಕಾ ಶೆಟ್ಟಿ ಮೊದಲಾದವರು ಭಾಗವಹಿಸುತ್ತಿದ್ದಾರೆ.

ಸಂಯೋಜಕ ಡಾ.ದಿನೇಶ್ ನಾಯಕ್ ಸ್ವಾಗತಿಸಿದರು. ಸಹ-ಸಂಯೋಜಕಿ ಅಲ್ವಿನಾ ಎ.ಎಂ. ವಂದಿಸಿದರು. ವಿದ್ಯಾರ್ಥಿನಿ ಶೇಬಾ ಆನ್ ಸಾಜು ಕಾರ್ಯಕ್ರಮ ನಿರೂಪಿಸಿದರು.

*Udayavani 23-02-2026*

# ರಾಷ್ಟ್ರ ನಿರ್ಮಾಣದಲ್ಲಿ ಶಿಕ್ಷಣದ ಪಾತ್ರ ಮಹತ್ತರ

**ಬಾವುಟಗುಡ್ಡೆ ಫೆ. 22:** ಸಂತ ಅಲೋಶಿಯಸ್ ಪರಿಗಣಿತ ವಿಶ್ವ ವಿದ್ಯಾನಿಲಯದಲ್ಲಿ ಟೆಡ್ ಎಕ್ಸ್ 5ನೇ ಆವೃತ್ತಿ 'ಅನ್ ರಿಟನ್ ಥ್ರೆಡ್ಸ್ ಆಫ್ ಥಾಟ್ಸ್' ಎಂಬ ಧ್ಯೇಯವಾಕ್ಯದೊಂದಿಗೆ ಶನಿವಾರ ಎಲ್ ಎಫ್ ರಸ್ಕಿನ್ಹಾ ಸಭಾಂಗಣದಲ್ಲಿ ನಡೆಯಿತು.




ಮುಖ್ಯ ಅತಿಥಿಯಾಗಿದ್ದ ಸಂಸ್ಥೆಯ ಹಿರಿಯ ವಿದ್ಯಾರ್ಥಿ, ವಕೀಲ ಪಿ. ರಂಜನ್ ರಾವ್ ಉದ್ಘಾಟಿಸಿ, ಒಬ್ಬ ವಿದ್ಯಾರ್ಥಿಗೆ ದೊರಕುವ ಶಿಕ್ಷಣವು ರಾಷ್ಟ್ರ ನಿರ್ಮಾಣದಲ್ಲಿ ಮಹತ್ತರ ಪಾತ್ರ ವಹಿಸುತ್ತದೆ. ಸಂಸ್ಥೆಯಿಂದ ಪದವಿ ಪಡೆದ ಪ್ರತಿಯೊಬ್ಬ ವಿದ್ಯಾರ್ಥಿಯೂ ತಮ್ಮ ಗುರಿ ಸಾಧನೆಗಳನ್ನು ತಲುಪುವಲ್ಲಿ ಮತ್ತು ಸಮಾಜಕ್ಕೆ ಅರ್ಥಪೂರ್ಣವಾದ ಕೊಡುಗೆ ನೀಡಲು ಸಹಕಾರಿಯಾಗಲಿ ಎಂದರು.

ಉದ್ಯಮಿ ಗೇವಿನ್ ಮಾಥಿಯಸ್ ಮಾತನಾಡಿ, ಜೀವನದಲ್ಲಿ ಅತ್ಯಂತ ಶಕ್ತಿಯುತವಾದ ಬದಲಾವಣೆಗಳು ಶ್ಲಾಘನೆ ಗಳೊಂದಿಗೆ ಮಾತ್ರ ಆರಂಭ ವಾಗುವುದಿಲ್ಲ, ಬದಲಾಗಿ ಅವುಗಳು ಕಾಣದ, ಬರೆಯದ, ಉಚ್ಚರಿಸದ ಚಿಂತನೆ ಗಳಿಂದಲೇ ಆರಂಭವಾಗುತ್ತವೆ ಎಂದರು. ಸಂತ ಅಲೋಶಿಯಸ್ ಪರಿಗಣಿತ ವಿವಿಯ ಕುಲಪತಿ ವಂ| ಡಾ| ಪ್ರವೀಣ್ ಮಾರ್ಟಿಸ್ ಎಸ್.ಜೆ. ಅಧ್ಯಕ್ಷತೆ ವಹಿಸಿದ್ದರು.

ಉದ್ಯಮಿ, ಶಿಕ್ಷಣತಜ್ಞ ಹೃತಿಕ್ ಶರ್ಮಾ, ಫಿಟ್ನೆಸ್ ಕೋಚ್ ಸಿಮ್ರನ್ ಚೋಪ್ರಾ, ಫ್ಯಾಷನ್ ಸ್ಟೈಲಿಸ್ಟ್ ಮರಿಯಂ ಹುಸೈನ್, ಇಎನ್‌ಟಿ ತಜ್ಞ ಡಾ| ಟಿ.ಪಿ. ದೇವನ್, ಶಿಕ್ಷಣತಜ್ಞೆ ಲೀಝಾ ಕಿರಣ್ ರೊಡ್ರಿಗಸ್, ಪ್ರಾಣಿ ಹಕ್ಕುಗಳ ಹೋರಾಟಗಾರ ಜಬಿ ಖಾನ್, ಚಾಯಾ ಆರ್ಟ್ ಲೈಟ್ ಸಂಸ್ಥಾಪಕ ಪ್ರಶಾಂತ್ ಎಸ್. ನಾಯ್ಕ ಭಾರತೀಯ ಸೇನೆಯ ನಿವೃತ್ತ ಕರ್ನಲ್ ಅರುಣ್ ಅಯ್ಯರ್, ಉದ್ಯಮಿ ಹೇಮಂತ್ ಶರ್ಮಾ, ನೃತ್ಯ ಕಲಾವಿದೆ ಅದ್ವಿತಾ ಶೆಟ್ಟಿ ಪಾಲ್ಗೊಂಡಿದ್ದರು.

ಸಂಯೋಜಕ ಡಾ| ದಿನೇಶ್ ನಾಯಕ್ ಸ್ವಾಗತಿಸಿ, ಸಹ ಸಂಯೋಜಕಿ ಅಲ್ವಿನಾ ಎ.ಎಂ. ವಂದಿಸಿದರು. ವಿದ್ಯಾರ್ಥಿನಿ ಶೇಬಾ ಆನ್ ಸಾಜು ನಿರೂಪಿಸಿದರು.

*The Hindu 24-02-2026*

# St. Aloysius College Alumni Association presents Aloysian Youth Icon award – 2026

**The Hindu Bureau**
MANGALURU

St. Aloysius College Alumni Association (SACAA) presented the Aloysian Youth Icon award - 2026 to five persons recently.

The awardees include individuals such as Viani Antonio D'Cunha, international chess master, Shruthi Merin Lal, scholar in anthropology and sociology, Ninaad Lasrado, viral immunologist, Swetha Arehole, danseuse and performing arts professional, and Manvitha Kamath, actor and cultural entrepreneur, a press release from St. Aloysius (Deemed-to-be-University) stated.




St. Aloysius College Alumni Association presented the Aloysian Youth Icon award – 2026 to five persons recently.

SACAA launched the award in 2023 to recognise young achievers who have carved a niche for themselves in diverse fields and to inspire students through their exemplary journeys.

## Young alumni

It recognises young alumni who have demonstrated professional excellence, upheld institutional core values, and made meaningful contributions to society, the release added.

Melwin Pinto, rector of St. Aloysius Institutions, and Praveen Martis, Vice-Chancellor of St. Aloysius (Deemed-to-be-University), were present on the occasion.

Udayavani 24-02-2026

# ಅಲೋಶಿಯಸ್ ಯುವ ಐಕಾನ್ – 2026 ಪ್ರಶಸ್ತಿ ಪ್ರದಾನ

**ಬಾವುಟಗುಡ್ಡೆ, ಫೆ. 23:** ಸಂತ ಅಲೋಶಿಯಸ್ ಕಾಲೇಜು ಹಳೆ ವಿದ್ಯಾರ್ಥಿಗಳ ಸಂಘದ ವತಿಯಿಂದ ವಿವಿಧ ಕ್ಷೇತ್ರಗಳಲ್ಲಿ ಗುರುತಿಸಿಕೊಂಡ ಯುವ ಸಾಧಕರನ್ನು ಗುರುತಿಸಿ, ಅವರ ಅನುಕರಣೀಯ ಪ್ರಯಾಣದ ಮೂಲಕ ವಿದ್ಯಾರ್ಥಿಗಳನ್ನು ಪ್ರೇರೇಪಿಸಲು ನೀಡಲಾಗುವ 'ಅಲೋಶಿಯಸ್ ಯುವ ಐಕಾನ್' ಪ್ರಶಸ್ತಿ ಪ್ರದಾನ ಇತ್ತೀಚೆಗೆ ಅಲೋಶಿಯಸ್ ವಿವಿಯ ಎಲ್ ಎಫ್ ರಸ್ಕೀನ್ಹಾ ಹಾಲ್‌ನಲ್ಲಿ ನಡೆಯಿತು. ವೃತ್ತಿಪರ ಶ್ರೇಷ್ಠತೆ ಪ್ರದರ್ಶಿಸಿದ, ಸಾಂಸ್ಥಿಕ ಮೂಲ ಮೌಲ್ಯ ಎತ್ತಿಹಿಡಿದ ಮತ್ತು ಸಮಾಜಕ್ಕೆ ಅರ್ಥಪೂರ್ಣ ಕೊಡುಗೆ ನೀಡಿದ ಯುವ ಹಳೆಯ ವಿದ್ಯಾರ್ಥಿಗಳನ್ನು ಗುರುತಿಸಿ ಪ್ರಶಸ್ತಿ ನೀಡಲಾಯಿತು.

ಅಲೋಶಿಯಸ್ ಸಂಸ್ಥೆಗಳ ರೆಕ್ಟರ್ ವಂ| ಮೆಲ್ವಿನ್ ಪಿಂಟೊ ಎಸ್.ಜೆ., ಅಲೋಶಿಯಸ್ ವಿ.ವಿ. ಕುಲಪತಿ ರೆ| ವಂ|




ಡಾ| ಪ್ರವೀಣ್ ಮಾರ್ಟಿಸ್ ಎಸ್‌ಜೆ; ಎಸ್‌ಎಸಿಎಎ ಅಧ್ಯಕ್ಷ ಅನಿಲ್ ಕುಮಾರ್, ಕಾರ್ಯದರ್ಶಿ ಕಾನ್ರಾಡ್ ನಜರೆತ್, ಅಲೋಶಿಯಸ್ ಪಿಯು ಕಾಲೇಜಿನ ಪ್ರಾಂಶುಪಾಲ ವಂ| ಕ್ಲಿಫರ್ಡ್ ಮತ್ತು ಯೂತ್ ಐಕಾನ್ 2026ರ ಸಂಚಾಲಕ ಕ್ಯಾ| ಪ್ಯಾಟ್ರಿಕ್ ಪಾಯ್ಸ್ ಮೊದಲಾದವರು ಉಪಸ್ಥಿತರಿದ್ದರು.

ಸಾಧಕ ಹಳೆ ವಿದ್ಯಾರ್ಥಿಗಳಾದ ವಿಯಾನಿ ಆಂಟೋನಿಯೊ ಡಿ'ಕುನ್ಹಾ (ಅಂತಾರಾಷ್ಟ್ರೀಯ ಚೆಸ್ ಮಾಸ್ಟರ್) ಶ್ರುತಿ ಮೆರಿನ್ ಲಾಲ್ (ಮಾನವಶಾಸ್ತ್ರ ಮತ್ತು ಸಮಾಜಶಾಸ್ತ್ರದ ವಿದ್ವಾಂಸೆ) ನಿನಾದ್ ಲಸ್ರಾದೊ – ವೈರಲ್ ಇಮ್ಯುನೊಲಾಜಿಸ್ಟ್, ಶ್ವೇತಾ ಅರೆಹೊಳೆ (ನೃತ್ಯ ಮತ್ತು ಪ್ರದರ್ಶನ ಕಲೆ) ಮಾನ್ವಿತಾ ಕಾಮತ್ (ನಟಿ ಮತ್ತು ಸಾಂಸ್ಕೃತಿಕ ಉದ್ಯಮಿ) ಅಲೋಶಿಯನ್ ಯೂತ್ ಐಕಾನ್ – 2026ರ ಪ್ರಶಸ್ತಿಗೆ ಭಾಜನರಾದರು.

Udayavani 24-02-2026

# ಕೆನರಾ ಕಾಲೇಜಿನಲ್ಲಿ ಭೌತಶಾಸ್ತ್ರ ಉಪನ್ಯಾಸ

**ಕೊಡಿಯಾಲಬೈಲು, ಫೆ. 23:** ಪ್ರೊ| ಪ್ರಕಾಶ್ ಪಿ. ಕಾರಟ್ ದತ್ತಿ ಉಪನ್ಯಾಸ ಸರಣಿಯ 12ನೇ ವರ್ಷದ ಉಪನ್ಯಾಸ ಶನಿವಾರ ಮಂಗಳೂರಿನ ಕೆನರಾ ಕಾಲೇಜಿನ ಸಭಾಂಗಣದಲ್ಲಿ ನಡೆಯಿತು.

ಸಾಗರದ ಸಾಗರ ವಿಜ್ಞಾನ ಕೇಂದ್ರದ ವಿಜ್ಞಾನಿ ಡಾ| ಎಚ್.ಎಸ್. ಜೀವನ್ ಅವರು. 'ಕಾಂತೀಯ ಅಸ್ಥಿರತೆಯ ಸನಿಹದಲ್ಲಿನ ನವೀನ ಮಜಲುಗಳು' ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು. ಕಾಂತೀಯ ಮತ್ತು ಅಕಾಂತೀಯ ವಸ್ತುಗಳಲ್ಲಿ ಕಾಂತೀಯ ಹಂತ ಪರಿವರ್ತನೆಯಲ್ಲಿ ತಾಪಮಾನದ ಮಹತ್ವವನ್ನು ವಿವರಿಸಿದರು. ಡೋಪಿಂಗ್, ಒತ್ತಡ ಅನ್ವಯಿಸುವುದು ಹಾಗೂ ತಾಪಮಾನ ಬದಲಾವಣೆ ಮಾಡುವ ಸಂದರ್ಭಗಳಲ್ಲಿ ಸೂಪರ್ ಕಂಡಕ್ಟಿಂಗ್ ವಸ್ತುಗಳಲ್ಲಿ ಹೊಸ ಹಂತ ಪರಿವರ್ತನೆಗಳನ್ನು ತಿಳಿದುಕೊಳ್ಳುವ ಮಹತ್ವವನ್ನು ಅವರು ವಿವರಿಸಿದರು.



ಕೆನರಾ ಕಾಲೇಜು ಪ್ರಾಂಶುಪಾಲೆ ಡಾ| ಪ್ರೇಮಲತಾ ವಿ. ಅಧ್ಯಕ್ಷತೆ ವಹಿಸಿ ಮಾತನಾಡಿ, ಇಂತಹ ಕಾರ್ಯಕ್ರಮಗಳು ವಿಜ್ಞಾನದ ಬಗ್ಗೆ ವಿದ್ಯಾರ್ಥಿಗಳ ಸದಭಿರುಚಿಗಳನ್ನು ಹೆಚ್ಚಿಸಲು ಸಹಾಯಕ ವಾಗಿದೆ ಎಂದರು. ಭಾರತೀಯ ಭೌತಶಾಸ್ತ್ರ ಶಿಕ್ಷಕರ ಸಂಘದ ವತಿಯಿಂದ ಜೀವನಮಾನ ಸಾಧನೆಯ ಪ್ರಶಸ್ತಿ ಪಡೆದ ಡಾ| ಕೆ.ವಿ. ರಾವ್ ಅವರನ್ನು ಸಮ್ಮಾನಿಸಲಾಯಿತು.

ಮಂಗಳೂರು ಕೆನರಾ ಕಾಲೇಜಿನ ಭೌತಶಾಸ್ತ್ರದ ಮಾಜಿ ಪ್ರಾಧ್ಯಾಪಕ ಪ್ರೊ| ಜಿ.ಜಿ. ಪ್ರಭು, ಮಂಗಳೂರು ವಿಶ್ವವಿದ್ಯಾನಿಲಯ ಮತ್ತು ಸಂತ ಅಲೋಶಿಯಸ್ ಕಾಲೇಜಿನ ನಿವೃತ್ತ ಭೌತಶಾಸ್ತ್ರದ ಪ್ರಾಧ್ಯಾಪಕ ಪ್ರಕಾಶ್ ಪಿ. ಕಾರಟ್, ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಕುಲಸಚಿವ ಡಾ| ರೊನಾಲ್ಡ್ ನಝ್ರೆತ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಸಂತ ಅಲೋಸಿಯಸ್ ವಿವಿಯ ಭೌತಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ| ನೀಲಕಂಠನ್ ವಿ.ಕೆ. ಸ್ವಾಗತಿಸಿದರು. ಕೆನರಾ ಕಾಲೇಜಿನ ಭೌತಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ| ಆಶಾಕಿರಣ್ ಪಕ್ಕಳ ವಂದಿಸಿದರು.

Prajavani 25-02-2026

# ಹಿರಿಯ ವಿದ್ಯಾರ್ಥಿಗಳ ಸಂಘಕ್ಕೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಗೋವಾದ ಸಲ್ಗಾಂವ್ಕರ್ ಇನ್‌ಸ್ಟಿಟ್ಯೂಟ್ ಆಫ್ ಇಂಟರ್‌ನ್ಯಾಷನಲ್ ಹಾಸ್ಪಿಟಾಲಿಟಿ ಮ್ಯಾನೇಜ್‌ಮೆಂಟ್ ಸಂಸ್ಥೆಯಲ್ಲಿ ಈಚೆಗೆ ನಡೆದ ಫೆಡರೇಶನ್ ಆಫ್ ಜೆಸ್ಯೂಟ್ 11ನೇ ಹಳೆಯ ವಿದ್ಯಾರ್ಥಿಗಳ ಸಂಘದ ಕಾಂಗ್ರೆಸ್‌ನಲ್ಲಿ ನಗರದ ಸೇಂಟ್ ಅಲೋಶಿಯಸ್ ಕಾಲೇಜಿನ ಹಳೆಯ ವಿದ್ಯಾರ್ಥಿಗಳ ಸಂಘವು, 'ಸಾಮಾಜಿಕ ಚಾಂಪಿಯನ್ ಪ್ರಶಸ್ತಿ' ಪಡೆದುಕೊಂಡಿದೆ.

2023ರಿಂದ ಜೂನ್ 2025ರ ಅವಧಿಯಲ್ಲಿ ಮಂಗಳೂರು ಜಿಲ್ಲಾ ಕಾರಾಗೃಹದಲ್ಲಿ ಅಲೋಶಿಯಸ್ ಸಂಸ್ಥೆಯು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಹಯೋಗದಲ್ಲಿ ಕೈದಿಗಳ ಮನಃ ಪರಿವರ್ತನೆಗಾಗಿ ಆಯೋಜಿಸಿದ್ದ ಸಂಪರ್ಕ ಕಾರ್ಯಕ್ರಮಗಳನ್ನು ಗುರುತಿಸಿ ಈ ಪ್ರಶಸ್ತಿ ನೀಡಲಾಗಿದೆ.



ಗೋವಾದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಂಗಳುರಿನ ಸೇಂಟ್ ಅಲೋಶಿಯಸ್ ಕಾಲೇಜಿನ ಹಳೆಯ ವಿದ್ಯಾರ್ಥಿಗಳ ಸಂಘವು, 'ಸಾಮಾಜಿಕ ಚಾಂಪಿಯನ್ ಪ್ರಶಸ್ತಿ' ಪಡೆದುಕೊಂಡಿತು

ಕಾಲೇಜಿನ ಹಳೆವಿದ್ಯಾರ್ಥಿ ಸಂಘದ ತಂಡದಲ್ಲಿ ಕರ್ನಾಟಕ ಪ್ರಾಂತ್ಯದ ರೆಕ್ಟರ್ ಮತ್ತು ಸಂಯೋಜಕ ಫಾ. ಮೆಲ್ವಿನ್ ಪಿಂಟೊ, ಪ್ರೊ. ಎಡ್ಮಂಡ್ ಫ್ರಾಂಕ್, ಅನಿಲ್ ಕುಮಾರ್, ಮಾರುತಿ ಜೆ, ರಿಚರ್ಡ್ ಗೊನ್ಸಾಲ್ವೆಸ್, ಮೈಕೆಲ್ ಡಿಸೋಜ, ನವೀನ್ ಮಸ್ಕರೇನ್ಹಸ್, ಕಾನ್ರಾಡ್ ನಜರೆತ್, ಡೆನಿಸ್ ಲೋಬೊ, ಡಾ. ಜೀನಾ ಮೆಂಡೋನ್ಸಾ ಮತ್ತು ಸವಿತಾ ಡಿಸೋಜ ಇದ್ದರು.

Udayavani 26-02-2026

# ಅಲೋಶಿಯಸ್ ಕಾಲೇಜಿನ ಹಳೆ ವಿದ್ಯಾರ್ಥಿಗಳ ಸಂಘಕ್ಕೆ ಸಾಮಾಜಿಕ ಚಾಂಪಿಯನ್ ಪ್ರಶಸ್ತಿ

**ಮಹಾನಗರ, ಫೆ. 25:** ಮಂಗಳೂರಿನ ಸಂತ ಅಲೋಶಿಯಸ್ ಕಾಲೇಜಿನ ಹಳೆಯ ವಿದ್ಯಾರ್ಥಿಗಳ ಸಂಘವು ಗೋವಾದಲ್ಲಿ ಸಲ್ಗಾಂವ್ಕರ್'ಇನ್ ಸ್ಟಿಟ್ಯೂಟ್ ಆಫ್ ಇಂಟರ್ ನ್ಯಾಶನಲ್ ಹಾಸ್ಪಿಟಾಲಿಟಿ ಮ್ಯಾನೇಜ್ಮೆಂಟ್‌ನಲ್ಲಿ ಫೆ. 6ರಿಂದ 8ರ ವರೆಗೆ ನಡೆದ 11ನೇ ಫೆಡರೇಶನ್ ಆಫ್ ಜೆಸ್ಯೂಟ್ ಹಳೆಯ ವಿದ್ಯಾರ್ಥಿಗಳ ಸಂಘ ಕಾಂಗ್ರೆಸ್ ನಲ್ಲಿ 'ಸಾಮಾಜಿಕ ಚಾಂಪಿಯನ್ ಪ್ರಶಸ್ತಿ'ಯನ್ನು ಗೆದ್ದಿದೆ.

2023ರಿಂದ ಜೂನ್ 2025ರ ಅವಧಿಯಲ್ಲಿ ಮಂಗಳೂರು ಜಿಲ್ಲಾ ಕಾರಾಗೃಹದಲ್ಲಿ ಸಂತ ಅಲೋಶಿಯಸ್ ಸಂಸ್ಥೆಯು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಹಯೋಗದೊಂದಿಗೆ



ಜೈಲು ಕೈದಿಗಳ ಮನಸ್ಸಿನ ಪರಿವರ್ತನೆಗಾಗಿ ಆಯೋಜಿಸಿದ್ದ ಸಂಪರ್ಕ ಕಾರ್ಯಕ್ರಮಗಳನ್ನು ಗುರುತಿಸಿ ಈ ಪ್ರಶಸ್ತಿಯನ್ನು ನೀಡಲಾಗಿದೆ.

ತಂಡದಲ್ಲಿ ಕರ್ನಾಟಕ ಪ್ರಾಂತದ ರೆಕ್ಟರ್ ಮತ್ತು ಸಂಯೋಜಕರಾದ ವಂ। ಮೆಲ್ವಿನ್ ಪಿಂಟೊ, ಪ್ರೊ। ಎಡ್ಮಂಡ್ ಫ್ರಾಂಕ್, ಅನಿಲ್ ಕುಮಾರ್, ಮಾರುತಿ ಜೆ., ಡಾ। ರಿಚರ್ಡ್ ಗೊನ್ಸಾಲ್ವಿಸ್, ಮೈಕೆಲ್ ಡಿ'ಸೋಜಾ, ನವೀನ್ ಮಸ್ಕರೇನ್ಹಸ್, ಕಾನ್ರಾಡ್ ನಜರೆತ್, ಡೆನಿಸ್ ಲೋಬೋ, ಡಾ। ಜೀನಾ ಮೆಂಡೋನ್ಸಾ ಮತ್ತು ಸವಿತಾ ಡಿ'ಸೋಜಾ ಮೊದಲಾದವರು ಉಪಸ್ಥಿತರಿದ್ದರು.

*Kannadaprabha 25-02-2026*

# ಸಂತ ಅಲೋಶಿಯಸ್ ಕಾಲೇಜ್ ಹಳೆ ವಿದ್ಯಾರ್ಥಿ ಸಂಘಕ್ಕೆ ಪ್ರಶಸ್ತಿ




ಆಲೋಶಿಯಸ್ ಹಳೆ ವಿದ್ಯಾರ್ಥಿ ಸಂಘಕ್ಕೆ ಪ್ರಶಸ್ತಿ ಪ್ರದಾನ

• **ಕನ್ನಡಪ್ರಭ ವಾರ್ತೆ** ಮಂಗಳೂರು

ಮಂಗಳೂರಿನ ಸಂತ ಅಲೋಶಿಯಸ್ ಕಾಲೇಜಿನ ಹಳೆಯ ವಿದ್ಯಾರ್ಥಿಗಳ ಸಂಘದಿಂದ ಗೋವಾದಲ್ಲಿ ಸಲ್ಗಾಂವ್ಕರ್ ಇನ್‌ಸ್ಟಿಟ್ಯೂಟ್ ಆಫ್ ಇಂಟರ್‌ನ್ಯಾಷನಲ್ ಹಾಸ್ಪಿಟಾಲಿಟಿ ಮ್ಯಾನೇಜ್‌ಮೆಂಟ್‌ನಲ್ಲಿ ಫೆಬ್ರವರಿ 6 ರಿಂದ 8 ರ ವರೆಗೆ ನಡೆದ 11ನೇ ಫೆಡರೇಶನ್ ಆಫ್ ಜೆಸ್ಯೂಟ್ ಹಳೆಯ ವಿದ್ಯಾರ್ಥಿಗಳ ಸಂಘ (JAAI) ಕಾಂಗ್ರೆಸ್‌ನಲ್ಲಿ 'ಸಾಮಾಜಿಕ ಚಾಂಪಿಯನ್ಸ್ ಪ್ರಶಸ್ತಿ' ಗೆದ್ದಿದೆ.

2023 ರಿಂದ ಜೂನ್ 2025 ರ ಅವಧಿಯಲ್ಲಿ ಮಂಗಳೂರು ಜಿಲ್ಲಾ ಕಾರಾಗೃಹದಲ್ಲಿ ಸಂತ ಅಲೋಶಿಯಸ್ ಸಂಸ್ಥೆಯು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಹಯೋಗದೊಂದಿಗೆ ಜೈಲು ಕೈದಿಗಳ ಮನಸ್ಸಿನ ಪರಿವರ್ತನೆಗಾಗಿ ಆಯೋಜಿಸಲಾದ ಸಂಪರ್ಕ ಕಾರ್ಯಕ್ರಮಗಳನ್ನು ಗುರುತಿಸಿ ಈ ಪ್ರಶಸ್ತಿಯನ್ನು ನೀಡಲಾಗಿದೆ.

SACAA ತಂಡದಲ್ಲಿ ಕರ್ನಾಟಕ ಪ್ರಾಂತ್ಯದ ರೆಕ್ಟರ್‌ಮತ್ತು ಸಂಯೋಜಕರಾದ ರೆ. ಫಾ. ಮೆಲ್ವಿನ್ ಪಿಂಟೊ, ಪ್ರೊ. ಎಡ್ಮಂಡ್ ಫ್ರಾಂಕ್, ಅನಿಲ್ ಕುಮಾರ್, ಮಾರುತಿ ಜೆ., ಡಾ. ರಿಚರ್ಡ್ ಗೊನ್ಸಾಲ್ವಿಸ್, ಮೈಕೆಲ್ ಡಿ ಸೋಜಾ, ನವೀನ್ ಮಸ್ಕರೇನ್ಹಸ್, ಕಾನ್ರಾಡ್ ನಜರೆತ್, ಡೆನಿಸ್ ಲೋಬೊ, ಡಾ. ಜೀನಾ ಮೆಂಡೋನ್ಸಾ, ಸವಿತಾ ಡಿಸೋಜಾ ಇದ್ದರು.

*Varthabharathi 28-02-2026*

# ಅಲೋಶಿಯಸ್ ಹಳೆ ವಿದ್ಯಾರ್ಥಿಗಳ ಸಂಘಕ್ಕೆ ಸಾಮಾಜಿಕ ಚಾಂಪಿಯನ್ಸ್ ಪ್ರಶಸ್ತಿ

ಮಂಗಳೂರು, ಫೆ.27: ನಗರದ ಸಂತ ಅಲೋಶಿಯಸ್ ಕಾಲೇಜಿನ ಹಳೆ ವಿದ್ಯಾರ್ಥಿಗಳ ಸಂಘವು, ಗೋವಾದಲ್ಲಿ ಸಲ್ಗಾಂವ್ಕರ್ ಇನ್‌ಸ್ಟಿಟ್ಯೂಟ್ ಆಫ್ ಇಂಟರ್‌ನ್ಯಾಶನಲ್ ಹಾಸ್ಪಿಟಾಲಿಟಿ ಮ್ಯಾನೇಜ್‌ಮೆಂಟ್ ವತಿಯಿಂದ ಇತ್ತೀಚೆಗೆ ನಡೆಸಿದ 11ನೇ ಫೆಡರೇಶನ್ ಆಫ್ ಜೆಸ್ಯೂಟ್ ಹಳೆ ವಿದ್ಯಾರ್ಥಿಗಳ ಸಂಘ (ಜೆಎಎಐ) ಸಮಿತಿಯಲ್ಲಿ ಸಾಮಾಜಿಕ ಚಾಂಪಿಯನ್ಸ್ ಪ್ರಶಸ್ತಿಯನ್ನು ಗೆದ್ದಿದೆ.

2023ರಿಂದ 2025ರ ಅವಧಿಯಲ್ಲಿ ಮಂಗಳೂರು ಜಿಲ್ಲಾ ಕಾರಾಗೃಹದಲ್ಲಿ ಸಂತ ಅಲೋಶಿಯಸ್ ಸಂಸ್ಥೆಯು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಹಯೋಗದೊಂದಿಗೆ ಜೈಲು ಕೈದಿಗಳ ಮನಸ್ಸಿನ ಪರಿವರ್ತನೆಗಾಗಿ ಆಯೋಜಿಸಲಾದ ಸಂಪರ್ಕ ಕಾರ್ಯಕ್ರಮಗಳನ್ನು ಗುರುತಿಸಿ ಈ ಪ್ರಶಸ್ತಿಯನ್ನು ನೀಡಲಾಗಿದೆ.

ಕರ್ನಾಟಕ ಪ್ರಾಂತದ ರೆಕ್ಟರ್ ಮತ್ತು ಸಂಯೋಜಕ ಫಾ.ಮೆಲ್ವಿನ್ ಪಿಂಟೊ, ಪ್ರೊ.ಎಡ್ಮಂಡ್ ಫ್ರಾಂಕ್, ಅನಿಲ್ ಕುಮಾರ್, ಮಾರುತಿ ಜೆ., ಡಾ.ರಿಚರ್ಡ್ ಗೊನ್ಸಾಲ್ವಿಸ್, ಮೈಕಲ್ ಡಿಸೋಜ, ನವೀನ್ ಮಸ್ಕರೇನ್ಹಸ್, ಕಾನ್ರಾಡ್ ನಝ್ರೆತ್, ಡೇನಿಸ್ ಲೋಬೊ, ಡಾ.ಜೀನಾ ಮೆಂಡೋನ್ಸಾ ಮತ್ತು ಸವಿತಾ ಡಿಸೋಜ ಕಾಲೇಜು ಹಳೆ ವಿದ್ಯಾರ್ಥಿಗಳ ತಂಡದಲ್ಲಿದ್ದಾರೆ.

*Times of India 25-02-2026*

## Alumni association wins award

St Aloysius College Alumni Association (SACAA) Mangaluru won the Social Champions Award at the 11th Federation of Jesuit Alumni Associations of India (JAAI) Congress held in Goa recently. The award was conferred in recognition of the outreach programmes organised for the transformation of the minds of prison inmates in the Mangalore District Prison, in association with St Aloysius (Deemed To Be University), Mangaluru, and the District Legal Services Authority, between 2023 -2025.

*Udayavani 27-02-2026*

**ಅಲೋಶಿಯಸ್ ವಿವಿಯಲ್ಲಿ ಮಾತೃಭಾಷಾ ದಿನಾಚರಣೆ**

## ಮಾತೃಭಾಷೆ ನಮ್ಮ ಸಂಸ್ಕೃತಿಯ ಗುರುತು



**ಬಾವುಟಗುಡ್ಡೆ ಫೆ. 26:** ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಭಾಷಾ ಮತ್ತು ಸಾಂಸ್ಕೃತಿಕ ಅಧ್ಯಯನ ನಿಕೇತನ ವತಿಯಿಂದ ಮಾತೃಭಾಷಾ ದಿನದ ಅಂಗವಾಗಿ 'ಮಾತೃಭಾಷೆ ನನ್ನ ಗುರುತು' ಎಂಬ ವಿಷಯದಲ್ಲಿ ಒಂದು ದಿನದ ಕಾರ್ಯಕ್ರಮ ಆಯೋಜಿಸಲಾಯಿತು.

ಮುಖ್ಯ ಅತಿಥಿಯಾಗಿದ್ದ ತುಳು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ತಾರಾನಾಥ ಗಟ್ಟಿ ಮಾತನಾಡಿ, ಮಾತೃಭಾಷೆ ನಮ್ಮ ಸಂಸ್ಕೃತಿಯ ಗುರುತು. ಭಾರತದಲ್ಲಿ ಅನೇಕ ಭಾಷೆಗಳು ವಿನಾಶದ ಅಂಚಿನಲ್ಲಿವೆ. ನಮ್ಮ ಭಾಷೆಯನ್ನು ಉಳಿಸಿಕೊಳ್ಳಲು ದಿನಕ್ಕೆ ಕನಿಷ್ಠ ಒಂದು ಗಂಟೆ ಕುಟುಂಬದವರೊಂದಿಗೆ ಮಾತೃ ಭಾಷೆಯಲ್ಲಿ ಮಾತನಾಡಬೇಕು. ಇದರಿಂದ ಪರಸ್ಪರ ಸಂಬಂಧಗಳೂ ಗಾಢವಾಗುತ್ತವೆ ಎಂದರು.

ಅಧ್ಯಕ್ಷತೆ ವಹಿಸಿದ ಕುಲಸಚಿವ ಡಾ| ರೋನಾಲ್ಡ್ ನಜರೆತ್, ಇಂಗ್ಲಿಷ್ ಮಾತ್ರವೇ ವಿಶ್ವದ ಭಾಷೆಯಲ್ಲ, ಅನೇಕ ಭಾಷೆಗಳು ತಮ್ಮ ಗುರುತನ್ನು ಉಳಿಸಿಕೊಂಡಿವೆ. ಜಪಾನ್, ಫ್ರಾನ್ಸ್ ಮುಂತಾದ ದೇಶಗಳಲ್ಲಿ ಜನರು ತಮ್ಮ ಭಾಷೆಯೊಂದಿಗೆ ಆಳವಾದ ಬಾಂಧವ್ಯ ಹೊಂದಿದ್ದಾರೆ. ಮಾತೃ ಭಾಷೆಯಲ್ಲಿ ಅಧ್ಯಯನ ಮಾಡಿದರೆ ಹೆಚ್ಚಿನ ಪ್ರಗತಿ ಸಾಧ್ಯ ಎಂದರು.

ಪಾರಂಪರಿಕ ವಾದ್ಯಗಳನ್ನು ನುಡಿಸಿ ಕಾರ್ಯಕ್ರಮ ಉದ್ಘಾಟಿಸಲಾಯಿತು. ದಕ್ಷಿಣ, ಉತ್ತರ, ಈಶಾನ್ಯ ಭಾರತ ಹಾಗೂ ಜಪಾನ್, ಶ್ರೀಲಂಕಾದ ವಿದ್ಯಾರ್ಥಿಗಳು ಭಾಗವಹಿಸಿದರು. ಮನೋರಂಜನ ಕಾರ್ಯಕ್ರಮದಲ್ಲಿ ಭಾರತದ ವಿವಿಧ ಭಾಗಗಳ ಸಾಂಪ್ರದಾಯಿಕ ನೃತ್ಯ ಮತ್ತು ಗಾಯನ ಪ್ರದರ್ಶಿಸಲಾಯಿತು.

ಗ್ರೀಷ್ಮಾ ದಾಮೋದರನ್ ಸ್ವಾಗತಿಸಿದರು. ಡಾ| ಮಹಬೂಬ್ ಅಲಿ ಅ. ನದಾಫ್ ವಂದಿಸಿದರು. ನವ್ಯ ಕಾರ್ಯಕ್ರಮ ನಿರೂಪಿಸಿದರು. ಭಾಷಾ ಮತ್ತು ಸಾಂಸ್ಕೃತಿಕ ಅಧ್ಯಯನ ನಿಕೇತನದ ಡೀನ್ ಡಾ| ಮಹಾಲಿಂಗ ಭಟ್, ವಿವಿಧ ಭಾಷಾ ಉಪನ್ಯಾಸಕರಾದ ಫ್ಲೋರಾ ಕ್ಯಾಸ್ಟಲಿನೋ, ಪ್ರಶಾಂತಿ, ರತ್ನಮ್ಮ, ಪ್ರಶಾಂತ್ ಉಪಸ್ಥಿತರಿದ್ದರು.

Rajsthan patrika 25-02-2026

# मातृभाषा हमारी पहचान: संवाद से सुदृढ़ हों संबंध



वाद्ययंत्रों के वादन से उद्घाटन करते हुए मुख्य अतिथि तारानाथ गट्टी।

**मेंगलूरु @ पत्रिका.** अंतरराष्ट्रीय मातृभाषा दिवस के अवसर पर शनिवार को संत अलोशियस (मानित) विश्वविद्यालय के भाषा एवं सांस्कृतिक अध्ययन विद्यालय द्वारा "मातृभाषा मेरी पहचान" विषय पर एकदिवसीय कार्यक्रम आयोजित किया गया। कर्नाटक तुलु साहित्य अकादमी के अध्यक्ष तारानाथ गट्टी ने विद्यार्थियों को संबोधित करते हुए कहा कि मातृभाषा हमारी संस्कृति और अस्मिता की पहचान है। उन्होंने सुझाव दिया कि अपनी पहचान बनाए रखने के लिए दिन में कम से कम एक घंटा परिवारजनों के साथ मातृभाषा में संवाद करना चाहिए। कार्यक्रम की अध्यक्षता करते हुए विश्वविद्यालय के कुलसचिव डॉ. रोनाल्ड नाजरेथ ने कहा कि अंग्रेजी ही विश्व की एकमात्र भाषा नहीं है। उद्घाटन पारंपरिक वाद्ययंत्रों के वादन से हुआ। विश्वविद्यालय में अध्ययनरत 37 मातृभाषाओं के विद्यार्थियों ने अपनी-अपनी भाषा के संरक्षण और संवर्धन का संकल्प लिया। सांस्कृतिक प्रस्तुतियों में भारत के विभिन्न क्षेत्रों के सामूहिक नृत्य और गायन ने मंत्रमुग्ध कर दिया।

Samyukthakarnataka 25-02-2026

# 32 ಪಕ್ಷಿ ಪ್ರಭೇದಗಳ ದಾಖಲೀಕರಣ

**ಸಂ.ಕ.ಸಮಾಚಾರ, ಮಂಗಳೂರು**

ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದಲ್ಲಿ ಫೆಬ್ರವರಿ 13 ರಿಂದ 16 ರವರೆಗೆ ರಾಷ್ಟ್ರವ್ಯಾಪಿ ಗ್ರೇಟ್ ಬ್ಯಾಕ್ಯಾರ್ಡ್ ಬರ್ಡ್ ಕೌಂಟ್‌ನ ಭಾಗವಾಗಿ ನಡೆದ ಕ್ಯಾಂಪಸ್ ಬರ್ಡ್ ಕೌಂಟ್‌ನಲ್ಲಿ 32 ಪಕ್ಷಿ ಪ್ರಭೇದಗಳ ದಾಖಲೀಕರಣ ನಡೆಸಲಾಗಿದೆ.

ನಾಲ್ಕು ದಿನಗಳ ಜೀವವೈವಿಧ್ಯ ಸಮೀಕ್ಷೆಯು ನಗರದ ಹೃದಯಭಾಗದಲ್ಲಿರುವ ಸಂಸ್ಥೆಯ 146 ವರ್ಷ ಹಳೆಯದಾದ, 37 ಎಕರೆ ವಿಸ್ತೀರ್ಣದ ಹಸಿರು ಕ್ಯಾಂಪಸ್‌ನಲ್ಲಿ ನಡೆಯಿತು.

ಬರ್ಡ್ ಕೌಂಟ್ ಇಂಡಿಯಾ ಇಬರ್ಡ್ ಸಹಯೋಗದೊಂದಿಗೆ ಈ ಕ್ಯಾಂಪಸ್ ಬರ್ಡ್ ಕೌಂಟ್ 2026 ನಡೆದಿದೆ. 2019ರಿಂದ ಕ್ಯಾಂಪಸ್ ಬರ್ಡ್ ಕೌಂಟ್ ಉಪಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿರುವ ಈ ಸಂಸ್ಥೆಯು ರಾಷ್ಟ್ರೀಯ ನಾಗರಿಕ ವಿಜ್ಞಾನ ದತ್ತಸಂಚಯಗಳಿಗೆ ಸ್ಥಿರವಾಗಿ ಕೊಡುಗೆ ನೀಡುತ್ತಿದೆ.

ಕ್ಯಾಂಪಸ್ ಬರ್ಡ್ ಕೌಂಟ್ 2026 ಅನ್ನು ಪ್ರಾಣಿಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಕಿರಣ್ ವಾಟಿ ಮತ್ತು ಗ್ಲಾವಿನ್ ಥಾಮಸ್ ರೊಡ್ರಿಗಸ್ ಮಾರ್ಗದರ್ಶನದಲ್ಲಿ, ಪ್ರಾಣಿಶಾಸ್ತ್ರ ವಿಭಾಗದ ಅಧ್ಯಾಪಕ ಸದಸ್ಯರು ಮತ್ತು ವಿದ್ಯಾರ್ಥಿಗಳ ಸಕ್ರಿಯ ಭಾಗವಹಿಸುವಿಕೆಯೊಂದಿಗೆ ನಡೆಸಲಾಯಿತು.

ದಾಖಲಾದ ಜಾತಿಗಳಲ್ಲಿ ರಾಕ್ ಪಿಜನ್, ಗ್ರೇಟರ್ ಕೂಕಲ್, ಏಷ್ಯನ್ ಕೋಯೆಲ್ ಮತ್ತು ಏಷ್ಯನ್ ಪಾಮ್ ಸ್ವಿಫ್ಟ್‌ನಂತಹ



ಸಾಮಾನ್ಯ ನಗರ ಮತ್ತು ಅರಣ್ಯ ಪಕ್ಷಿಗಳು ಸೇರಿವೆ. ಬ್ಲ್ಯಾಕ್ ಕೈಟ್ ಮತ್ತು ಬ್ರಾಹ್ಮಿನಿ ಕೈಟ್ ಸೇರಿದಂತೆ ರಾಪ್ಟರ್‌ಗಳು ಕ್ಯಾಂಪಸ್‌ನಲ್ಲಿರುವುದನ್ನು ಗಮನಿಸಲಾಯಿತು. ಲಿಟಲ್ ಕಾರ್ಮೊರಂಟ್ ಮತ್ತು ಈಸ್ಟರ್ನ್ ಕ್ಯಾಟಲ್ ಎಗ್ರೆಟ್ಗಳ ಉಪಸ್ಥಿತಿಯು ಕ್ಯಾಂಪಸ್ ಭೂದೃಶ್ಯದ ಪರಿಸರ ಸಂಪರ್ಕವನ್ನು ಮತ್ತಷ್ಟು ಪ್ರತಿಬಿಂಬಿಸುತ್ತದೆ. ಬಿಳಿ ಗಂಟಲಿನ ಕಿಂಗ್ಫಿಷರ್, ಬಿಳಿ ಕೆನ್ನೆಯ ಬಾರ್ಬೆಟ್, ಮಲಬಾರ್ ಫ್ಲೇಮ್‌ಬ್ಯಾಕ್ ಮತ್ತು ಗುಲಾಬಿ- ರಿಂಗ್ಡ್ ಪ್ಯಾರಕೀಟ್ನಂತಹ ಮರ-ವಾಸಿಸುವ ಜಾತಿಗಳನ್ನು ಸಹ ದಾಖಲಿಸಲಾಗಿದೆ. ಎಣಿಕೆಯ ಅವಧಿಯಲ್ಲಿ ಆಶಿ ಡ್ರೊಂಗೊ ಮತ್ತು ಗ್ರೀನ್ ವಾರ್ಬ್ಲರ್ ಸೇರಿದಂತೆ ವಲಸೆ ಮತ್ತು ಕಾಲೋಚಿತ ಸಂದರ್ಶಕರನ್ನು ದಾಖಲಿಸಲಾಗಿದೆ.

ಕ್ಯಾಂಪಸ್‌ನಾದ್ಯಂತ ಹಲವಾರು ಗೂಡುಕಟ್ಟುವ ಪಕ್ಷಿಗಳನ್ನು ಗಮನಿಸಲಾಯಿತು, ಇದು ಸಕ್ರಿಯ ಸಂತಾನೋತ್ಪತ್ತಿ ಚಟುವಟಿಕೆಯನ್ನು ಸೂಚಿಸುತ್ತದೆ. ರೆಡ್-ವಿಸ್ಕರ್ಡ್ ಬುಲ್ಬುಲ್‌ನ ಗೂಡುಗಳನ್ನು ದಾಖಲಿಸಲಾಗಿದೆ. ಪರ್ಯಾಯ ದ್ವೀಪ ಭಾರತಕ್ಕೆ ಕಾಲೋಚಿತ ಸಂತಾನೋತ್ಪತ್ತಿಗೆ ಭೇಟಿ ನೀಡುವ ಇಂಡಿಯನ್ ಗೋಲ್ಡನ್ ಓರಿಯೊಲ್ ಅನ್ನು ಸಹ ಕ್ಯಾಂಪಸ್ನೊಳಗೆ ಸೂಕ್ತವಾದ ಆವಾಸಸ್ಥಾನವನ್ನು ಬಳಸುವುದನ್ನು ಗಮನಿಸಲಾಗಿದೆ.

ಉದ್ಯಾನಗಳು ಮತ್ತು ಮರಗಳ ಹೊದಿಕೆಯು ಕೀಟನಾಶಕ ಮತ್ತು ಮಕರಂದ ತಿನ್ನುವ ಪಕ್ಷಿಗಳಾದ ಕಾಮನ್ ಟೈಲರ್‌ಬರ್ಡ್, ಗ್ರೇ-ಬ್ರೆಸ್ಟೆಡ್ ಪ್ರಿನಿಯಾ, ಪೇಲ್-ಬಿಲ್ಡ್ ಫ್ಲವರ್‌ಪೆಕರ್, ಮತ್ತು ಪರ್ಪಲ್-ರಂಪ್ಡ್ ಸನ್‌ಬರ್ಡ್, ಪರ್ಪಲ್ ಸನ್‌ಬರ್ಡ್ ಮತ್ತು ಲೋಟೆನ್ಸ್ ಸನ್‌ಬರ್ಡ್ ಸೇರಿದಂತೆ ಸನ್‌ಬರ್ಡ್ ಪ್ರಭೇದಗಳಿಗೆ ಆಶ್ರಯ ನೀಡಿವೆ. ಚೆಸ್ಟ್ನಟ್-ಟೈಲ್ಡ್ ಸ್ಟಾರ್ಲಿಂಗ್, ಕಾಮನ್ ಮೈನಾ, ಜಂಗಲ್ ಮೈನಾ, ಆರೆಂಜ್-ಹೆಡೆಡ್ ಥ್ರಷ್, ಓರಿಯಂಟಲ್ ಮ್ಯಾಗ್ಪಿ-ರಾಬಿನ್ ಮತ್ತು ವೈಟ್-ರಂಪ್ಡ್ ಮುನಿಯಾ ಮೊದಲಾದ ಪ್ರಬೇಧಗಳು ಕ್ಯಾಂಪಸ್ನಲ್ಲಿ ಪತ್ತೆಯಾಗಿವೆ ಎಂದು ಅಲೋಶಿಯಸ್ ವಿವಿ ಪ್ರಕಟನೆ ತಿಳಿಸಿದೆ.

Deccan Herald 25-02-2026





Some of the bird species recorded on the campus included Jungle Myna and Indian Golden Oriole.

# 32 bird species recorded during survey on St Aloysius campus

**MANGALURU, DHNS:** The St Aloysius Deemed-to-be-University conducted the Campus Bird Count 2026 as part of the nationwide Great Backyard Bird Count organised by Bird Count India in collaboration with eBird.

The four-day biodiversity survey resulted in the documentation of 32 bird species within the institution's 145-year-old, 37-acre green campus located in the heart of the city.

The college, which attained the status of a Deemed-to-be-University two years ago, has been actively participating in the Campus Bird Count initiative since 2019, contributing consistently to national citizen science databases.

The Campus Bird Count 2026 was conducted under the guidance of Kiran Vati K and Glavin Thomas Rodrigues, Assistant Professors, Department of Zoology, with the active participation of faculty members and students.

The survey involved systematic observation and documentation of avian diversity across different habitat patches within the campus.

Among the species recorded were common urban and woodland birds, such as Rock Pigeon, Greater Coucal, Asian Koel, and Asian Palm Swift. Raptors, including Black Kite and Brahminy Kite, were observed soaring and perching within the campus. The presence of Little Cormorant and Eastern Cattle Egret further reflected the ecological connectivity of the campus landscape.

Tree-dwelling species, such as White-throated Kingfisher, White-cheeked Barbet, Malabar Flameback, and Rose-ringed Parakeet, were also documented. Migratory and seasonal visitors, including the Ashy Drongo and Green Warbler, were recorded during the count period.

Significantly, several nesting birds were observed across the campus, indicating active breeding activity. Nests of the Red-whiskered Bulbul were documented, and the Indian Golden Oriole—a seasonal breeding visitor to peninsular India—was also observed utilising suitable habitat within the campus. The presence of breeding activity highlights the role of the campus as a safe and resource-rich environment supporting avian reproduction.

The gardens and tree cover further supported insectivorous and nectar-feeding birds, such as Common Tailorbird, Gray-breasted Prinia, Pale-billed Flowerpecker, and sunbird species, including Purple-rumped Sunbird, Purple Sunbird, and Loten's Sunbird.

Other notable species recorded include Chestnut-tailed Starling, Common Myna, Jungle Myna, Orange-headed Thrush, Oriental Magpie-Robin, and White-rumped Munia.

*Indian Express 25-02-2026*

# St Aloysius records 32 bird species during campus count

**EXPRESS NEWS SERVICE**
@ Mangaluru

ST Aloysius (Deemed to be University), Mangaluru, successfully conducted the Campus Bird Count 2026 from February 13 to 16 as part of the nationwide Great Backyard Bird Count organised by Bird Count India in collaboration with eBird.

The four-day biodiversity survey resulted in the documentation of 32 bird species within the institution's 145-year-old, 37-acre green campus located in the heart of the city. The college has been actively participating in the Campus Bird Count initiative since 2019, contributing consistently to national citizen science databases.

The Campus Bird Count 2026 was conducted under the guidance of Kiran Vati K and Glavin Thomas Rodrigues, Assistant Professors in the Department of Zoology, with the active participation of faculty members and students of the Department of Zoology. The survey involved systematic observation and documentation of avian diversity across different habitat patches within the campus.





Bird species found at St Aloysius

Among the species recorded were common urban and woodland birds such as Rock Pigeon, Greater Coucal, Asian Koel, and Asian Palm Swift. Raptors, including Black Kite and Brahminy Kite, were observed soaring and perching within the campus. The presence of Little Cormorant and Eastern Cattle Egret further reflected the ecological connectivity of the campus landscape.

Tree-dwelling species, such as White-throated Kingfisher, White-cheeked Barbet, Malabar Flameback, and Rose-ringed Parakeet, were also documented. Migratory and seasonal visitors, including the Ashy Drongo and Green Warbler, were recorded during the count period.

Significantly, several nesting birds were observed across the campus, indicating active breeding activity. Nests of the Red-whiskered Bulbul were documented, and the Indian Golden Oriole — a seasonal breeding visitor to peninsular India was also observed utilising suitable habitat within the campus.

The presence of breeding activity highlights the role of the campus as a safe and resource-rich environment supporting avian reproduction.

The gardens and tree cover further supported insectivorous and nectar-feeding birds, such as Common Tailorbird, Gray-breasted Prinia, Pale-billed Flowerpecker, and sunbird species, including Purple-rumped Sunbird, Purple Sunbird, and Loten's Sunbird. Other notable species recorded include Chestnut-tailed Starling, Common Myna, Jungle Myna, Orange-headed Thrush, Oriental Magpie-Robin, and White-rumped Munia.

Regular documentation of bird diversity since 2019 has strengthened the institution's long-term biodiversity monitoring efforts. The continued presence of resident, migratory, and breeding bird species underscores the ecological importance of preserving green spaces within urban environments.

*Indian Express 27-02-2026*

# Campus Bird Count: 28 bird species recorded at St Agnes College, M'luru

**EXPRESS NEWS SERVICE**
@ Mangaluru

THE Department of Zoology at St Agnes College organised a three-day Campus Bird Count from February 18 to 20, documenting 28 bird species and reinforcing the importance of urban biodiversity conservation.

The survey was conducted across the college's tree-lined avenues, gardens, and open grounds as part of an initiative to promote experiential learning and ecological awareness among students. The exercise enabled participants to observe and identify avian diversity within the campus, highlighting the role educational institutions can play in sustaining microhabitats in urban settings.

The bird count was carried out under the guidance of Kiran Vati K, Assistant Professor in the Department of Zoology at St Aloysius (Deemed to be University), along with faculty members of St Agnes College. Students were trained in basic bird identification techniques, observation skills, and documentation methods during the programme.



Among the species recorded were the Black Kite, Asian Koel, Purple Sunbird, White-throated Kingfisher, Indian Golden Oriole, and Barn Owl. The presence of insectivorous, frugivorous, nectarivorous, and predatory birds on campus reflects a healthy and balanced ecosystem supported by diverse vegetation and green cover.

The programme concluded with an interactive session focusing on the importance of conserving urban biodiversity and maintaining green spaces amid rapid urbanisation. Faculty members emphasised that regular biodiversity audits, such as campus bird counts, not only strengthen scientific temperament among students but also encourage environmental stewardship.

The Hindu 28-02-2026

# 32 bird species documented on St. Aloysius university campus during CBC – 2026

The Hindu Bureau
MANGALURU

In all, 32 bird species were documented on the 37-acre campus of St. Aloysius (Deemed to be University) in the heart of the city during the Campus Bird Count-2026.

The bird count was conducted for four days from February 13 as part of the nationwide Great Backyard Bird Count organised by Bird Count India in collaboration with eBird. The survey involved systematic observation and documentation of avian diversity across different habitat patches within the campus.

Among the species recorded were common urban and woodland birds such as Rock Pigeon, Greater Coucal, Asian Koel, and Asian Palm Swift. Raptors, including Black Kite and Brahminy Kite, were observed soaring and perching within the campus. The presence of the Little Cormorant and Eastern Cattle Egret further reflected the ecological connectivity of the campus landscape, a release from the university said on Tuesday.



White-bellied Munia (*Lonchira leucogastra*) spotted during the Campus Bird Count 2026 on St. Aloysius (Deemed-to-be University) campus. SPECIAL ARRANGEMENT

Tree-dwelling species such as White-throated Kingfisher, White-cheeked Barbet, Malabar Flameback, and Rose-ringed Parakeet were also documented. Migratory and seasonal visitors were recorded during the count period.

Significantly, several nesting birds were observed across the campus, indicating active breeding activity.

The gardens and tree cover further supported insectivorous and nectar-feeding birds.

Regular documentation of bird diversity since 2019 in the 145-year-old institution has strengthened the institution's long-term biodiversity monitoring efforts. The continued presence of resident, migratory, and breeding bird species underscores the ecological importance of preserving green spaces within urban environments, the release added.

This year's bird count was done under the guidance of K. Kiran Vati and Glavin Thomas Rodrigues, assistant professors in the Department of Zoology.

*Udayavani 25-06-2026*

# ಅಲೋಶಿಯಸ್ ವಿವಿ ಕ್ಯಾಂಪಸ್: ಬರ್ಡ್ ಕೌಂಟ್ – 2026

**ಮಹಾನಗರ, ಫೆ. 24:** ಮಂಗಳೂರಿನ ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದಲ್ಲಿ ಫೆ. 13ರಿಂದ 16ರ ವರೆಗೆ ಬರ್ಡ್ ಕೌಂಟ್ ಇಂಡಿಯಾ ಇಬರ್ಡ್ ಸಹಯೋಗದೊಂದಿಗೆ ನಡೆದ 'ಕ್ಯಾಂಪಸ್ ಬರ್ಡ್ ಕೌಂಟ್ 2026'ರಲ್ಲಿ 32 ಪಕ್ಷಿ ಪ್ರಭೇದಗಳ ದಾಖಲೀಕರಣ ಮಾಡಲಾಯಿತು.

ನಾಲ್ಕು ದಿನಗಳ ಈ ಜೀವವೈವಿಧ್ಯ ಸಮೀಕ್ಷೆಯು ನಗರದ ಹೃದಯಭಾಗದಲ್ಲಿರುವ ಸಂಸ್ಥೆಯ 146 ವರ್ಷ ಹಳೆಯದಾದ, 37 ಎಕರೆ ವಿಸ್ತೀರ್ಣದ ಹಸುರು ಕ್ಯಾಂಪಸ್‌ನಲ್ಲಿ ನಡೆದಿದ್ದು 32 ಪಕ್ಷಿ ಪ್ರಭೇದಗಳ ದಾಖಲೀಕರಣಕ್ಕೆ ಕಾರಣವಾಯಿತು.

ಕ್ಯಾಂಪಸ್ ಬರ್ಡ್ ಕೌಂಟ್– 2026 ಅನ್ನು ಪ್ರಾಣಿಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಕಿರಣ್ ವಾಟಿ ಮತ್ತು ಗ್ಲಾವಿನ್ ಥಾಮಸ್ ರೊಡ್ರಿಗಸ್ ಅವರ ಮಾರ್ಗದರ್ಶನದಲ್ಲಿ, ಪ್ರಾಣಿಶಾಸ್ತ್ರ ವಿಭಾಗದ ಅಧ್ಯಾಪಕ ಸದಸ್ಯರು ಮತ್ತು ವಿದ್ಯಾರ್ಥಿಗಳ ಸಕ್ರಿಯ ಭಾಗವಹಿಸುವಿಕೆಯೊಂದಿಗೆ ನಡೆಸಲಾಯಿತು.

ದಾಖಲಾದ ಜಾತಿಗಳಲ್ಲಿ ರಾಕ್ ಪಿಜನ್, ಗ್ರೇಟರ್ ಕೂಕಲ್, ಏಷ್ಯನ್ ಕೋಯೆಲ್ ಮತ್ತು ಏಷ್ಯನ್ ಪಾಮ್ ಸ್ವಿಫ್ಟ್‌ನಂತಹ ಸಾಮಾನ್ಯ ನಗರ ಮತ್ತು ಅರಣ್ಯ ಪಕ್ಷಿಗಳು ಸೇರಿವೆ. ಬ್ಲ್ಯಾಕ್ ಕೈಟ್ ಮತ್ತು ಬ್ರಾಹ್ಮಿನಿ ಕೈಟ್ ಕೂಡ ಕ್ಯಾಂಪಸ್ ನಲ್ಲಿರುವುದನ್ನು ಗಮನಿಸಲಾಯಿತು.

ಲಿಟಲ್ ಕಾರ್ಮೊರಂಟ್, ಈಸ್ಟರ್ನ್ ಕ್ಯಾಟಲ್ ಎಗ್ರೆಟ್ ಗಳನ್ನು, ಬಿಳಿ ಗಂಟಲಿನ ಕಿಂಗ್ ಫಿಷರ್, ಬಿಳಿ ಕೆನ್ನೆಯ ಬಾರ್ಬೆಟ್, ಮಲಬಾರ್ ಫ್ಲೇಮ್ ಬ್ಯಾಕ್ ಮತ್ತು ಗುಲಾಬಿ-ರಿಂಗ್ಡ್ ಪ್ಯಾರಕೀಟನ್ ನಂತಹ ಜಾತಿಗಳನ್ನು ಕೂಡ ದಾಖಲಿಸಲಾಗಿದೆ. ಅಲ್ಲದೆ ಆಶಿ ಡ್ರೊಂಗೊ ಮತ್ತು ಗ್ರೀನ್ ವಾರ್ಬ್ಲರ್ ಗಳನ್ನು ಗುರುತಿಸಲಾಗಿದೆ.

ಹಲವಾರು ಗೂಡುಕಟ್ಟುವ ಪಕ್ಷಿಗಳನ್ನು ಗಮನಿಸಲಾಯಿತು. ಗ್ರೇ-ಬ್ರೆಸ್ಟೆಡ್ ಪ್ರಿನಿಯಾ, ಪೇಲ್-ಬಿಲ್ಡ್ ಫ್ಲವರ್‌ಪೆಕರ್, ಮತ್ತು ಪರ್ಪಲ್ -ರಂಪ್ಡ್ ಸನ್ಬರ್ಡ್, ಪರ್ಪಲ್ ಸನ್ಬರ್ಡ್ ಮತ್ತು ಲೋಟೆನ್ಸ್ ಸನ್ಬರ್ಡ್ ಸೇರಿದಂತೆ ಸನ್ಬರ್ಡ್ ಪ್ರಭೇದಗಳನ್ನು ಗುರುತಿಸಲಾಯಿತು. ಕಾಮನ್ ಮೈನಾ, ಜಂಗಲ್ ಮೈನಾ, ಆರೆಂಜ್-ಹೆಡೆಡ್ ಥ್ರಷ್, ಓರಿಯಂಟಲ್ ಮ್ಯಾಗ್ಪಿ-ರಾಬಿನ್ ಮತ್ತು ವೈಟ್-ರಂಪ್ಡ್ ಮುನಿಯಾ ಸೇರಿದಂತೆ ಇತರ ಗಮನಾರ್ಹ ಪ್ರಭೇದಗಳನ್ನು ದಾಖಲಿಸಲಾಗಿದೆ.

## Digital News Links

1. Mangaluru: Certificate Course on Personal Wealth Management at St Aloysius University
   https://www.daijiworld.com/news/newsDisplay?newsID=1306516
2. Mangaluru: St Aloysius holds 'EYECONIC 2026 - Empowered beyond lives'
   https://www.daijiworld.com/news/newsDisplay?newsID=1306659
3. Astitva (R) Mangaluru to host two-day soulful musical serenade at St Aloysius College on Feb 19, 20
   https://daijiworld.com/news/newsDisplay?newsID=1306854
4. ALOYSIAN YOUTH ICON AWARDS 2026
   https://www.youtube.com/watch?v=TkyFaKMp4v0
5. ಗೊನ್ಸಾಗ ಶಾಲೆಯಲ್ಲಿ ಮಾದಕದ್ರವ್ಯ ವಿರೋಧಿ ಕಾರ್ಯಕ್ರಮ
   https://jananudi.com/anti-drug-program-at-gonzaga-school/

6. ಮಂಗಳೂರುದಲ್ಲಿ ನಡೆದ ಭವ್ಯ ಸಂಗೀತ ಸಂಜೆ ಕಾರ್ಯಕ್ರಮದಲ್ಲಿ ಕಿರಿಯ ಡ್ರಮ್ ಪ್ರತಿಭೆ ಕೇಮ್ರಿಲ್ ಪಿಂಟೋ ಮಿಂಚಿದರು
   https://jananudi.com/youngest-drummer-prodigy-kemril-pinto-dazzles-mangaluru-at-grand-musical-evening/
7. ALOYSIUS (DEEMED TO BE UNIVERSITY) PRERANA NATIONAL LEVEL CULTURAL FEST
   https://www.youtube.com/watch?v=y2zjEzXSxfQ
8. Mangaluru: St Aloysius University holds MoU with ICT Academy
   https://www.daijiworld.com/news/newsDisplay?newsID=1307039
9. Mangaluru: St Aloysius holds national Hindi cultural fest 'PRERANA – 2026'
10. https://www.daijiworld.com/news/newsDisplay?newsID=1307052
11. Mangaluru: St Aloysius College Alumni Association holds Aloysian Youth Icon Award – 2026
    https://www.daijiworld.com/news/newsDisplay?newsID=1307040
12. Rasha Fathima of St Aloysius University excels globally in ACCA examination
    https://www.daijiworld.com/news/newsDisplay?newsID=1307099
13. TEDxStAloysius 2026 kicks off at St Aloysius with inspiring talks and thought-provoking insights
    https://www.daijiworld.com/news/newsDisplay?newsID=1307134
14. ಗೊನ್ಸಾಗ ಶಾಲೆಯಲ್ಲಿ ಮಾದಕದ್ರವ್ಯ ವಿರೋಧಿ ಕಾರ್ಯಕ್ರಮ
    https://jananudi.com/anti-drug-program-at-gonzaga-school/#google_vignette
15. ಸೇಂಟ್ ಅಲೋಶಿಯಸ್ ವಿ ವಿ :ACCA ಪರೀಕ್ಷೆಯಲ್ಲಿ ರಾಶಾ ಫಾತಿಮಾ ಜಾಗತಿಕ ಸಾಧನೆ
    https://www.upayuktha.com/2026/02/St-Aloysius-University-Rasha-Fatima-achieves-global-success-in-ACCA-exam.html
16. St Aloysius University Hosts 'Gumot Gin'yan' Konkanni Traditional Songs Workshop
    https://newskarnataka.com/community/st-aloysius-university-hosts-gumot-ginyan-konkanni-traditional-songs-workshop/23022026#google_vignette
17. St Aloysius University records 32 species during Campus Bird Count 2026
    https://daijiworld.com/news/newsDisplay?newsID=1307384
18. International Mother Language Day Celebrated at St Aloysius University, Mangaluru
    https://pingara.com/english-news/international-mother-language-day-celebrated-at-st-aloysius-university-mangaluru/
19. St Aloysius Deemed to be University hosts online workshop on IPR, patent and design filing
    https://daijiworld.com/news/newsDisplay?newsID=1307412
20. St Aloysius College Alumni Association bags Social Champions Award
    https://www.daijiworld.com/news/newsDisplay?newsID=1307397
21. AIMIT hosts national seminar on investor behaviour and financial planning in digital age
    https://www.daijiworld.com/news/newsDisplay?newsID=1307502
22. SWARAANJALI 2026 - A Choral & Orchestral Concert of Spiritual & Contemporary Music
    https://www.youtube.com/watch?v=7uG0Oo4PTvk
23. St Aloysius University hosts 'Impetus 2026' four-day launchpad for innovation & entrepreneurship
    https://www.daijiworld.com/news/newsDisplay?newsID=1307754
24. Mangaluru: St Aloysius University observes National Science Day
    https://www.daijiworld.com/news/newsDisplay?newsID=1307778